International Journal of Kannada Research 2017; 3(2): 107-110

International Journal of Kannada Research
www.kannadajournal.com

**ISSN: 2454–5813**
IJSR 2017; 3(2): 107-110
© 2017 IJKS
www.kannadajournal.com
Received: 25-02-2017
Accepted: 30-03-2017

**ಎಸ್.ಬಿ.ಚನ್ನಗೌಡ್ರ**
ಎಂ.ಎ, ಮುಖ್ಯಸ್ಥರು ಕನ್ನಡ ವಿಭಾಗ ಪ್ರಾಂಶುಪಾಲರು ಬಿ.ಆರ್.ತಂಬಾಕದ ಪ್ರಥಮ ದರ್ಜೆ ಕಲಾ ವಾಣಿಜ್ಯ ಹಾಗೂ ವಿಜ್ಞಾನ ಮಹಾವಿದ್ಯಾಲಯ ಹಾಗೂ ಸ್ನಾತಕೋತ್ತರ ಅಧ್ಯಯನ ಕೇಂದ್ರ ಹಿರೇಕೆರೂರು. ಜಂಗಮವಾಣಿ, ಕರ್ನಾಟಕ, ಭಾರತ

**Correspondence**
**ಎಸ್.ಬಿ.ಚನ್ನಗೌಡ್ರ**
ಎಂ.ಎ, ಮುಖ್ಯಸ್ಥರು ಕನ್ನಡ ವಿಭಾಗ ಪ್ರಾಂಶುಪಾಲರು ಬಿ.ಆರ್.ತಂಬಾಕದ ಪ್ರಥಮ ದರ್ಜೆ ಕಲಾ ವಾಣಿಜ್ಯ ಹಾಗೂ ವಿಜ್ಞಾನ ಮಹಾವಿದ್ಯಾಲಯ ಹಾಗೂ ಸ್ನಾತಕೋತ್ತರ ಅಧ್ಯಯನ ಕೇಂದ್ರ ಹಿರೇಕೆರೂರು. ಜಂಗಮವಾಣಿ, ಕರ್ನಾಟಕ, ಭಾರತ

# ಸತ್ತಳಿಗೆ ನಾಡಿನ ಪ್ರಾಚೀನ ಇತಿಹಾಸ

**ಎಸ್.ಬಿ.ಚನ್ನಗೌಡ್ರ**

**ಪೀಠಿಕೆ**

ವಿಸ್ತಾರ ವೈವಿಧ್ಯತೆಗಳಿಂದ ಕೂಡಿದ ಭರತಖಂಡದಲ್ಲಿ ನೂರಾರು ಭಾಷೆಗಳು ಬಳಕೆಯಲ್ಲಿವೆ. ಅವುಗಳಲ್ಲಿ ೨೨ ಭಾಷೆಗಳನ್ನು ಮಾತ್ರ ಅಧಿಕೃತ ಭಾಷೆಗಳೆಂದು ಸ್ವೀಕರಿಸಿ ಮನ್ನಣೆ ನೀಡಿದ್ದಾರೆ. ಅವುಗಳಲ್ಲಿ ಕನ್ನಡ ಭಾಷೆಯು ಒಂದು. ಇದನ್ನು ಮಾತನಾಡುವ ಜನ ಕನ್ನಡಿಗರು, ಇವರ ಸಂಖ್ಯೆ ಸುಮಾರು ಆರುವರೆ ಕೋಟಿ ಇವರು ನೆಲಸಿರುವ ನಾಡು ಕನ್ನಡನಾಡು, ೧೯೭೩ ರಲ್ಲಿ ಕರ್ನಾಟಕವೆಂದು ಕರೆಯುವ ಈ ನಾಡು ಬಿಟೀಷರ ಕಾಲದಲ್ಲಿ ಹರಿದು ಹಂಚಿ ಹೋಗಿದ್ದ ಈ ನಾಡು ಈಗ ೬೪ ವರ್ಷಗಳ ಕೆಳಗೆ ಎಕೀಕರಣಗೊಂಡಿತು. ಈ ಕನ್ನಡ ನಾಡಿನ ವಿಸ್ತಾರ ಸುಮಾರು ೧.೯೧.೭೯೧ ಚದರ ಕೀಲೋಮಿಟರಗಳು, ಎರಡು ಸಾವಿರ ವರ್ಷಗಳಷ್ಟು ಧೀರ್ಘಕಾಲದ ಇತಿಹಾಸ ಪರಂಪರೆಯನ್ನುಳ್ಳ ಈ ನಾಡಿನಲ್ಲಿ ಪ್ರಾಮುಖ್ಯತೆಯನ್ನು ಪಡೆದಿರುವ ಅನೇಕ ಸುಂದರವಾದ ಕೋಟೆಗಳು , ಕೆರೆಗಳು, ದೇವಾಲಯಗಳು, ಮಸೀದಿಗಳು ಮತ್ತು ನಗರ ಪಟ್ಟಣಗಳನ್ನು ಕಾಣಬಹುದು. ಕರ್ನಾಟಕವು ಉತ್ಕೃಷ್ಟ ಹಾಗೂ ಶ್ರೀಮಂತ ದಾರ್ಮಿಕ ಮತ್ತು ಕಲಾ ಪರಂಪರೆಯನ್ನು ಹೊಂದಿದೆ, ಈ ಪ್ರದೇಶವನ್ನು ೧೫ನೆಯ ಶತಮಾನದ ಶಿಲಾಶಾಸನದಲ್ಲಿ ಕವಿಯೋರ್ವ ಈ ರೀತಿ ಬಣ್ಣಿಸಿದ್ದಾನೆ.

ಅಮಳ ವಿನಯದಾಗರವಾಗಿತ್ತು
ಪದ್ಮಾಸನಿಪ್ಪಾ ಪದ್ಮವಾದತ್ತು
ತಿವಿರಾದಯಶೋಧಾಮವಾದತ್ತು
ವಿದ್ಯಾಧನ ಜನ್ಮಸ್ಥಾನವಾದತ್ತು
ಸಮತರಳ ಗಂಬೀರ ಸದ್ಗೇಹವಾದತ್ತೆ
ನಿಸಲ್ಕಿಂತುಳ ನಾನಾ ಮಹಿಮೆಯೊಳಸೆಗುಂ
ಚಾರು ಕರ್ನಾಟದೇಶಂ.

ಕರ್ನಾಟಕ ಪ್ರದೇಶವು ಭಾರತದ ಪರ್ಯಾಯ ದ್ವೀಪದ ಪಶ್ಚಿಮ ಮಧ್ಯಭಾಗದಲ್ಲಿದೆ. ಭೌಗೋಳಿಕವಾಗಿ ಸುಂದರವಾದ ಮತ್ತು ಮನೋಹರವಾದ ಕರಾವಳಿ ಪ್ರದೇಶ ನಿತ್ಯಹರಿದ್ವರ್ಣದ ಕಾಡುಗಳಿಂದಲೂ ಎತ್ತರವಾದ ಪರ್ವತ ಸಾಲುಗಳಿಂದಲೂ ಕೂಡಿ ರಮಣೀಯವಾಗಿ ತೋರುವ ಪಶ್ಚಿಮ ಘಟ್ಟಗಳ ಪ್ರದೇಶ ಏರು ತಗ್ಗುಗಳಿಂದ ಕೂಡಿರುವ ವಿಶಾಲವಾದ ಕೆರೆಗಳು ದಕ್ಷಿಣದ ಬಯಲುಸೀಮೆ ಹಾಗೂ ಎತ್ತರವಾದ ವಿಸ್ತಾರವಾದ ಎರು ತಗ್ಗುಗಳು ಹೆಚ್ಚಾಗಿರುವ ವಿಫುಲ ವೃಕ್ಷಗಳ ಸಾರವತ್ತಾದ ಕಪ್ಪು ಕೆಂಪು ಮಣ್ಣನ್ನು ಹೊಂದಿದ ಶಿಲಾಮಯ ಪ್ರಸ್ಥಭೂಮಿಯನ್ನು ಒಳಗೊಂಡಿದೆ.

ಪುರಾತನ ದೇವಾಲಯಗಳು ಭಕ್ತರ ಧಾರ್ಮಿಕ ನಿಷ್ಠೆಯ ಪ್ರತೀಕವಾಗಿವೆ, ನಾಡಿನಾದ್ಯಂತ ಹರಡಿರುವ ಅಗ್ರಹಾರ ಮತ್ತು ಮಠಗಳು ಜನತೆಯ ಜ್ಞಾನದಾಹದ ಪ್ರತೀಕಗಳಾಗಿ ನಿಲ್ಲುತ್ತವೆ. ಎಲ್ಲೆಲ್ಲೂ ನಿಂತಿರುವ ವೀರಗಲ್ಲುಗಳು ನಮ್ಮ ಪ್ರಾಚೀನ ಇತಿಹಾಸದ ಶೌರ್ಯ ಸಾಹಸಗಳನ್ನು ಮೆರೆಯುತ್ತವೆ. ಕರ್ನಾಟಕದ ಪ್ರಾಚೀನತೆ ಹಳೆಯ ಶಿಲಾಯುಗದಷ್ಟು ಹಿಂದಿನದು ಹಾಗೆಯೇ ಪ್ರಾಚೀನ ಮತ್ತು ಮಧ್ಯಯುಗದ ಪ್ರಬಲ ಸಾಮ್ರಾಜ್ಯಗಳಿಗೆ ಇದೆ ತವರೂರಾಗಿದೆ. ಈ ಸಾಮ್ರಾಜ್ಯಗಳು ಪೋಸಿಸಿದ ತತ್ವಜ್ಞಾನಿಗಳು ಮತ್ತು ಸಂಗೀತ ಸಾಮ್ರಾಟರು ಹುಟ್ಟು ಹಾಕಿದ ಸಾಮಾಜಿಕ ಮತ್ತು ಧಾರ್ಮಿಕ ಚಳುವಳಿಗಳು ಇಂದೀಗೂ ಆ ಪರಂಪರೆಯನ್ನು ಮುಂದುವರಿಸಿಕೊಂಡು ಬಂದಿವೆ. ಭಾರತದ ಶ್ರೀಮಂತ ಸಾಂಸ್ಕೃತಿಕ ಪರಂಪರೆಗೆ ನಿಸಂಶಯವಾಗಿಯೂ ಕರ್ನಾಟಕವು ಅದ್ವಿತಿಯ ಕೊಡುಗೆ ನೀಡಿದೆ.

ಸಾಹಿತ್ಯ ಲಲಿತ ಕಲೆ ಧರ್ಮ ಹಾಗೂ ಆಧ್ಯಾತ್ಮಿಕ ಕ್ಷೇತ್ರಗಳಲ್ಲಿ ಕರ್ನಾಟಕದ ಸಾಧನೆಗಳು ಅಷ್ಟೇ ಗಣ್ಯವಾದವುಗಳು. ಭಾರತಾದ್ಯಂತ ಹರಡಿರುವ ಕರ್ನಾಟಕ ಸಂಗೀತವೆಂಬ ಪದ್ಧತಿಯನ್ನು ಅದು ಬೆಳಸಿತು, ಕರ್ನಾಟಕ ಮತ್ತು ಹಿಂದೂಸ್ಥಾನಿ ಈ ಎರಡು ಶಾಸ್ತ್ರೀಯ ಸಂಗೀತ ಪದ್ಧತಿಗಳಿಗೆ ಕರ್ನಾಟಕವು ಗಣನೀಯ ಕೊಡುಗೆ ನೀಡಿದೆ. ಹೀಗೆ ಕರ್ನಾಟಕವು ಭಾರತೀಯ ಪರಂಪರೆಗೆ ಉನ್ನತ ಕೊಡುಗೆ ನೀಡಿದ್ದು ಸಾಹಿತ್ಯ ತತ್ವ ವಾಸ್ತುಶಿಲ್ಪ ವಿಜ್ಞಾನ ಧಾರ್ಮಿಕ ವಿವಿಧ ಕ್ಷೇತ್ರಗಳ ಸಾಧನೆ ಅತ್ಯದ್ಭುತವಾಗಿದೆ. ಇಂತಹ ಕರ್ನಾಟಕದ ಮಣ್ಣಿನಲ್ಲಿ ಸರ್ವರಿಗೂ ಪರಿಚಿತನಿರುವ ಸರ್ವಾದಿಕಾರಿಯಾಗಿ ಸರ್ವವಿಷಯಗಳನ್ನು ಮೈಗೂಡಿಸಿಕೊಂಡು ತನ್ನ ತ್ರಿಪದಿಗಳ ಮೂಲಕ ನಾಡಿನಾದ್ಯಂತವಲ್ಲದೆ ಭಾರತದ ಕೆಲವು ಭಾಗಗಳಲ್ಲಿ ಹುಲುಸಾಗಿ ಬಿತ್ತಿದ ಸರ್ವಜ್ಞನ ನಾಡಿನ ಚರಿತ್ರೆ ಬಹು ವೈವಿಧ್ಯಮಯ ಪರಂಪರೆಯುಳ್ಳದ್ದಾಗಿದೆ.

ಕರ್ನಾಟಕದ ಮಧ್ಯ ಭಾಗದಲ್ಲಿರುವ ಹಾವೇರಿ ಜಿಲ್ಲೆ ಮೊದಲು ಧಾರವಾಡ ಜಿಲ್ಲೆಯ ತಾಲೂಕಾ ಕೇಂದ್ರವಾಗಿತ್ತು. ಸ್ವತಂತ್ರ ಜಿಲ್ಲಾ ರಚನೆಯ ನಿರಂತರ ಹೋರಾಟದ ಫಲವಾಗಿ ೧೯೯೭ ಅಗಸ್ಟ ೧೫ ರಂದು ನೂತನ ಜಿಲ್ಲೆಯಾಗಿ ಮಾರ್ಪಾಟು ಹೊಂದಿತು. ಈಗ ಈ ಜಿಲ್ಲೆಯಲ್ಲಿ ಹಾವೇರಿ, ಹಾನಗಲ್, ಹಿರೇಕೆರೂರ, ಬ್ಯಾಡಗಿ, ಸವಣೂರು, ರಾಣೆಬೆನ್ನೂರು ಮತ್ತು ಶಿಗ್ಗಾಂವಿ ಎಂಬ ರಟ್ಟಿಹಳ್ಳಿ ೮ ತಾಲೂಕುಗಳಿವೆ. ಇದು ೪,೮೫೧ ಚ.ಕಿ.ಮೀ ವಿಸ್ತಾರವನ್ನು ಹೊಂದಿದ್ದು ರಾಜ್ಯದ ೨೨ ನೇ ಜಿಲ್ಲೆಯಾಗಿದೆ. ಇದರಲ್ಲಿ ೧೯ ಹೋಬಳಿಗಳು ೬೯೯ ಜನವಸತಿ ಇರುವ ಹಳ್ಳಿಗಳು ೭ ಜನವಸತಿ ಇಲ್ಲದ ಹಳ್ಳಿಗಳಿವೆ. ೨೦೦೧ ರ ಜನಗಣತಿಯ ಪ್ರಕಾರ ಈ ಜಿಲ್ಲೆಯ ಒಟ್ಟು ಜನಸಂಖ್ಯೆ ೧೪,೩೯,೧೧೬ ರಷ್ಟಿದ್ದು ಸಾಕ್ಷರತೆಯ ಪ್ರಮಾಣ ೬೭.೮ ರಷ್ಟಿದೆ. ದಾವಣಗೇರಿ, ಬಳ್ಳಾರಿ, ಗದಗ, ಧಾರವಾಡ, ಉತ್ತರ ಕನ್ನಡ, ಶಿವಮೊಗ್ಗ ಜಿಲ್ಲೆಗಳು ಹಾವೇರಿ ಜಿಲ್ಲೆಯ ಮೇರೆಗಳಾಗಿವೆ. ಕೃಷ್ಣಮೃಗ ಅಭಯಾರಣ್ಯವಿರುವ ರಾಣೆಬೆನ್ನೂರು, ಮೆಣಸಿನಕಾಯಿಗೆ ಪ್ರಸಿದ್ಧವಾಗಿರುವ ಬ್ಯಾಡಗಿ, ಸರ್ವಜ್ಞ ಜನಿಸಿದ ಅಬ್ಬಲೂರು, ಸಂತ ಶರೀಫರು ಜನಿಸಿದ ಶಿಸುವಿನಾಳ, ಹಿರೇಕೆರೂರಿನ ಸಾತೇನಹಳ್ಳಿಯ ಶಾಂತಕವಿಗಳು, ಕನ್ನಡದ ಪ್ರಸಿದ್ಧ ಕಾದಂಬರಿಕಾರರಾದ ಗಳಗನಾಥರು ಜನಿಸಿದ ಗಳಗನಾಥ, ನಯಸೇನ ಜನಿಸಿದ ಮುಳಗುಂದ, ದಾಸಶ್ರೇಷ್ಠ ಕನಕದಾಸ ಆರಾಧ್ಯ ದೈವ ಆದಿಕೇಶವನಿರುವ ಕಾಗಿನೆಲೆ ಇರುವುದು ಈ ಜಿಲ್ಲೆಯಲ್ಲಿಯೇ. ಆಧುನಿಕವಾಗಿ ಬೆಳೆಯುತ್ತಿರುವ ಹಾವೇರಿ ಜಿಲ್ಲೆಗೆ ತನ್ನದೇ ಆದ ಶ್ರೀಮಂತ ಇತಿಹಾಸವಿದೆ ಮತ್ತು ಭವ್ಯವಾದ ಪರಂಪರೆ ಇದೆ.

ಈ ಜಿಲ್ಲೆಯ ಇತಿಹಾಸ ಕ್ರಿ.ಪೂ. ೩೫೦೦ ರಿಂದ ಕ್ರಿ.ಪೂ. ೧೦೦೦ ದ ಅವಧಿಯಲ್ಲಿ ಬದುಕಿದ್ದ ಹಳೆಯ ಶಿಲಾಯುಗದ ಜನರಿಂದ ಪ್ರಾರಂಭವಾಗುತ್ತದೆ. ಜಲ್ಲಾಪುರ, ವರ್ದಿ, ತೋಟಗಂಟಿ, ರಟ್ಟೀಹಳ್ಳಿ, ಹಳ್ಳೂರು, ಮುದೇನೂರು, ಚನ್ನಾಪುರ, ನದೀಹರಳಹಳ್ಳಿ ಮೊದಲಾದ ಸ್ಥಳಗಳಲ್ಲಿ ಹಳೇಶಿಲಾಯುಗದಿಂದ ಹಿಡಿದು ಇತಿಹಾಸ ಆರಂಭದ ಕಾಲದ ವರೆಗಿನ ಜನರ ನೆಲೆಗಳನ್ನು ಡಾ. ಕೆ.ವಿ. ರಮೇಶ, ಡಾ. ಶ್ರೀನಿವಾಸ ಪಾಡೀಗಾರ ಮುಂತಾದ ಅನೇಕ ವಿದ್ವಾಂಸರು ಶೋಧಿಸಿದ್ದಾರೆ. ಅನಂತರದ ಕಾಲದಲ್ಲಿ ಬರುವ ವಿವಿಧ ರಾಜಮನೆತನದವರು ಹಾವೇರಿ ಜಿಲ್ಲೆಯಯನ್ನು ಆಳಿದ್ದು ಅವರು ತಮ್ಮ ಆಡಳಿತಾವಧಿಯಲ್ಲಿ ಬರೆಯಿಸಿದ (ಕೊರೆಸಿದ) ಸುಮಾರು ಒಂದು ಸಾವಿರಕ್ಕೂ ಹೆಚ್ಚು ಶಾಸನಗಳು ಪ್ರಕಟವಾಗಿದೆ. ಅಲ್ಲದೆ ಇನ್ನೂ ಹಲವಾರು ಶಾಸನಗಳು ವಿದ್ವಾಂಸರ ಕಣ್ಣಿಗೆ ಕಾಣದೆ ಮರೆಯಾದರೆ ಕೆಲವು ನಮ್ಮ ಜನರ ಮೂಢನಂಬಿಕೆಗಳಿಗೆ ತುತ್ತಾಗಿ ಹಾಳಾಗಿವೆ. ಹಲವು ಶಾಸನಗಳು ಕಾಲನ ಕಾಲಗರ್ಭದಲ್ಲಿ ಇನ್ನೂ ಹುದುಗಿಕೊಂಡು ಹೋಗಿವೆ. ಈ ಪ್ರದೇಶದಲ್ಲಿ ಆಳ್ವಿಕೆ ಮಾಡಿದ ಅರಸರು ಸಾಮಂತರು, ಮಾಂಡಳಿಕರು, ಮುಂತಾದವರು ನಿರ್ಮಿಸಿದ ದೇವಾಲಯಗಳು, ಬಸದಿಗಳು ಈ ಜಿಲ್ಲೆಯ ಗತವೈಭವವನ್ನು ಸಾರುವ ಮೂಕಸಾಕ್ಷಿಗಳಾಗಿ ಇಂದಿಗೂ ನಿಂತಿವೆ.

"ಹಾವೇರಿ" ಎಂಬ ಹೆಸರು ಸುಮಾರು ೧೦೦೦ ವರ್ಷಗಳಷ್ಟು ಪ್ರಾಚೀನ, ಆದರೆ ಈ ಹೆಸರು ಹೇಗೆ ಬಂದಿತೆಂದು ಹೇಳುವುದು ಕಷ್ಟ ಆದರೆ ಶಾಸನಗಳಲ್ಲಿ ಈ ಊರನ್ನು ಹಾವರಿ ಪಾವರಿ ಹಾಹರಿ ಹಾವೇರಿ, ನಳಪುರಿ, ಹವರಿ ಎಂಬ ಹೆಸರುಗಳಿಂದ ಉಲ್ಲೇಖಿಸಲಾಗಿದೆ ಎಂದು ಕರೆಯುತ್ತಿದ್ದರೆಂದು ತಿಳಿದುಬರುತ್ತದೆ. ಈ ಹಿನ್ನಲೆಯಲ್ಲಿ ವಿಜಯನಗರದ ಪೂರ್ವ ಕಾಲದವರೆಗಿನ ಹಾವೇರಿ ಜಿಲ್ಲೆಯ ಇತಿಹಾಸವನ್ನು ಮುಂದೆ ನೋಡಬಹುದು.

**೨. ಪ್ರಾಗೈತಿಹಾಸ:** ಲಿಖಿತ ದಾಖಲೆಗಳು ಇಲ್ಲದ ಅಥವಾ ಅಕ್ಷರಜ್ಞಾನವಿಲ್ಲದ ಹಂತವನ್ನು ಇತಿಹಾಸ ಪೂರ್ವಕಾಲ (ಪ್ರಾಗೈತಿಹಾಸ) ಎಂದು ಕರೆಯುತ್ತಾರೆ. ಈ ಹಂತವು ಸುಧೀರ್ಘವಾಗಿದ್ದು ಕ್ರಿ.ಪೂ.ಸು ೫ ಲಕ್ಷ ವರ್ಷಗಳಿಂದ ಕ್ರಿ.ಶ.ಕೆಯ ಆರಂಭದ ವರೆಗೂ ರೂಢಿಯಲ್ಲಿತ್ತೆಂದು ತಿಳಿದು ಬರುತ್ತದೆ. ಈ ಕಾಲಮಾನವನ್ನು ಆಗ ಮನುಷ್ಯ ನಿತ್ಯ ಬಳಕೆ ಮಾಡುತ್ತಿದ್ದ ವಸ್ತುವಿನ ಆಧಾರದಿಂದ ಗುರುತಿಸಬಹುದಾಗಿದೆ. ಹೀಗಾಗಿ ವಸ್ತುವಿನ ಆಧಾರದಿಂದಲೇ ಈ ಕಾಲವನ್ನು ಶಿಲಾಯುಗದ ಸಂಸ್ಕೃತಿ ಮತ್ತು ಲೋಹ ಸಂಸ್ಕೃತಿ ಎಂದು ಎರಡು ಭಾಗಗಳಾಗಿ ಮಾಡಲಾಗಿದೆ.

**ಹಳೆಯ ಶಿಲಾಯುಗ:** ಅಧ್ಯಯನದ ದೃಷ್ಟಿಯಿಂದ ಹಳೆಯ ಶಿಲಾಯುಗವನ್ನು ಆದಿಶಿಲಾಯುಗ, ಮಧ್ಯ ಶಿಲಾಯುಗ, ಅಂತ್ಯ ಶಿಲಾಯುಗವೆಂದು ವಿಭಾಗಿಸಲಾಗಿದೆ. ಆದರೆ ಹಾವೇರಿ ಜಿಲ್ಲೆಯಲ್ಲಿ ಆದಿ ಶಿಲಾಯುಗ ಮತ್ತು ಮಧ್ಯ ಶಿಲಾಯುಗದ ನೆಲೆಗಳು ಮಾತ್ರ ಪತ್ತೆಯಾಗಿದ್ದು ಅಂತ್ಯ ಶಿಲಾಯುಗದ ನೆಲೆಗಳು ಕಂಡು ಬರುವುದಿಲ್ಲ. ಈ ಜಿಲ್ಲೆಯಲ್ಲಿ ಕಂಡು ಬರುವ ಆದಿಶಿಲಾಯುಗದ ನೆಲೆಗಳೆಂದರೆ ಬ್ಯಾಡಗಿ ತಾಲೂಕಿನ ಬೆಣ್ಣಿಹಳ್ಳನದಿ, ರಾಣೆಬೆನ್ನೂರ ತಾಲೂಕಿನ ಚನ್ನಾಪುರ, ನದಿಹರಳಹಳ್ಳಿ, ನೆಲವಾಗಿಲ, ಸವಣೂರು ತಾಲೂಕಿನ ಜಲ್ಲಾಪುರ, ಹಾನಗಲ್ ತಾಲೂಕಿನ ವರ್ದಿ, ಹಿರೇಕೆರೂರ ತಾಲೂಕಿನ ತೋಟಗಂಟಿ, ರಟ್ಟೀಹಳ್ಳಿ ಮಧ್ಯೆ ಹಳೆಯ ಶಿಲಾಯುಗದ ನೆಲೆಗಳೆಂದರೆ ಹಿರೇಕೆರೂರು ತಾಲೂಕಿನ ತೋಟಗಂಟಿ ಮತ್ತು ರಟ್ಟೀಹಳ್ಳಿ ಈ ನೆಲೆಗಳಲ್ಲಿ ಕ್ವಾರ್ಟ್ಸ ಮತ್ತು ಚರ್ಚ ಶಿಲೆಯಲ್ಲಿ ರೂಪಿತವಾದ ವಿವಿಧ ಮಾದರಿಯ ಉಪಕರಣಗಳು ದೊರೆತಿವೆ. ಅಲ್ಲದೆ ಕೆಲವು ಉಪಕರಣಗಳು ಅಶ್ಯುಲಿಯನ್ ಮಾದರಿಯಲ್ಲಿದ್ದು ಇನ್ನು ಕೆಲವು ಉಪಕರಣಗಳು ಯಾವುದೇ ನಿರ್ದಿಷ್ಟ ಮಾದರಿಯಲ್ಲಿಲ್ಲ.

**ಸೂಕ್ಷ್ಮ ಶಿಲಾಯುಗ:** ಈ ಸಂಸ್ಕೃತಿಯ ಹಂತವು ಮಾನವನು ಅಲೆಮಾರಿ ಜೀವನದಿಂದ ಒಂದೆಡೆ ನೆಲೆನಿಂತು ಬೇಟೆ, ಮೀನುಗಾರಿಕೆ, ಆಹಾರ ಸಂಗ್ರಹಣೆಯ ಜೊತೆಗೆ ಆಹಾರ ಉತ್ಪಾದನೆಯನ್ನು ಆರಂಭಿಸಿದುದರಿಂದ ಈ ಕಾಲವನ್ನು ಸ್ಥಿತ್ಯಂತರದ ಕಾಲವೆಂದು ಕರೆಯುತ್ತಾರೆ. ಈ ಸಂಸ್ಕೃತಿಯ ನೆಲೆಗಳ ಅಧ್ಯಯನವು ಆಗಿನ ಜನರ ಆಹಾರ ಪದ್ಧತಿ, ವಸತಿ ಕ್ರಮ, ಶವಸಂಸ್ಕಾರ ಪದ್ಧತಿ, ಮುಂತಾದ ಅಂಶಗಳ ಬಗೆಗೆ ಕುತೂಹಲಕರವಾದ ಮಾಹಿತಿಯನ್ನೊದಗಿಸುತ್ತದೆ. ಇಂತಹ ನಿವೇಶನಗಳು ಹಾವೇರಿ ಜಿಲ್ಲೆಯ ರಾಣೆಬೆನ್ನೂರು ತಾಲೂಕಿನ ನದಿಹರಳಹಳ್ಳಿ, ನೆಲವಾಗಿಲ, ಹಾನಗಲ್ ತಾಲೂಕಿನ ಅರೆಕೊಪ್ಪ, ಗಿರಸಿನಕೊಪ್ಪ ಹಾನಗಲ್ಲು, ಹಿರೇಕೆರೂರ ತಾಲೂಕಿನ ಬಾಳಂಬೀಡದಲ್ಲಿ ಕಂಡು ಬರುತ್ತವೆ. ಈ ನಿವೇಶನಗಳಲ್ಲಿ ವೈವಿಧ್ಯಮಯ ಉಪಕರಣಗಳು ಕಂಡುಬಂದಿದ್ದು ನೀಳಚಕ್ಕೆ, ಮೊನೆ, ಕೊರೆಯುಳಿ, ಡಬ್ಬಳ, ಮೊನೆಮಾದರಿ,

ಚಂದ್ರಾಕೃತಿ, ಬಾಲಚಂದ್ರಾಕೃತಿಯ ಉಪಕರಣಗಳಾಗಿದ್ದು ಚಾಲ್ಸಿಡೋನಿ, ಕ್ವಾರ್ಟ್ಸ್ ಹಾಳುಗಲ್ಲುಗಳಲ್ಲಿ ರೂಪಿತವಾಗಿವೆ.

**ನೂತನ ಶಿಲಾಯುಗ:** ಹಾವೇರಿ ಜಿಲ್ಲೆಯಲ್ಲಿ ಕಂಡುಬರುವ ಈ ಹಂತದ ಪ್ರಮುಖ ನೆಲೆಗಳೆಂದರೆ ರಾಣೆಬೆನ್ನೂರು ತಾಲೂಕಿನ ಮುದೇನೂರು, ಹಾದರಗೇರಿ, ಹಾವೇರಿ ತಾಲೂಕಿನ ಗಳಗನಾಥ, ಹಿರೇಕೆರೂರ ತಾಲೂಕಿನ ಶಿರಗಂಬಿ, ಪುರದಕೇರಿ, ಹಳ್ಳೂರು ಈ ಪ್ರಮುಖ ನೆಲೆಗಳ ಅಧ್ಯಯನದಿಂದ ಕರ್ನಾಟಕದಲ್ಲಿ ಸಾಂಸ್ಕೃತಿಕ ಹಂತವು ಉಚ್ಛ್ರಾಯ ಸ್ಥಿತಿಯಲ್ಲಿದ್ದುದು ಕಂಡು ಬರುತ್ತದೆ. ಇಲ್ಲಿ ದೊರೆತ ಈ ಹಂತದ ಮುಖ್ಯ ಅವಶೇಷಗಳೆಂದರೆ ಉಜ್ಜಿ ನಯಗೊಳಿಸಿದ ಕೊಡಲಿ, ಕಂದುವರ್ಣದ ಮಡಿಕೆಭಾಗ, ಕೆಂಪುವರ್ಣದ ಚಿರ್ತಿತ ಮಡಿಕೆಭಾಗ, ಮುಂತಾದವು ಅಷ್ಟೇ ಅಲ್ಲದೆ ಹಳ್ಳೂರಿನಲ್ಲಿ ದೊರೆತ ರಾಗಿಯ ಅವಶೇಷ ಅತೀ ಪ್ರಾಚೀನವಾಗಿ ಉಪಯೋಗವಾಗುತ್ತಿದ್ದ ದವಸವೆಂದು ತಿಳಿದು ಬರುತ್ತದೆ.

**ಶಿಲಾ ತಾಮ್ರಯುಗ:** ನೂತನ ಶಿಲಾಯುಗ ಸಂಸ್ಕೃತಿಯ ನಂತರ ವಿಕಸನಗೊಂಡ ಹಂತವಿದು. ತಾಮ್ರದ ಅದುರಿನ ಜ್ಞಾನ ಲೋಹವಾಗಿ ಪರಿವರ್ತನೆ ಹೊಂದಿ, ನೀಳ ಚಕ್ಕಿಗಳ ಉಪಯೋಗ, ಶಿಲೆಗೆ ಬದಲಾಗಿ ಲೋಹದ ಆಯುಧಗಳ ಬಳಕೆ, ಸುಟ್ಟ ಮಣ್ಣಿನ ಪಾತ್ರೆಗಳ ಬಳಕೆ ಸುಧಾರಿಸಿದ ಬೇಸಾಯ ಪದ್ಧತಿ ಮೊದಲಾದ ಮುಖ್ಯ ಲಕ್ಷಣಗಳನ್ನು ಸಾಂಸ್ಕೃತಿಕ ಹಂತವಿದಾಗಿದೆ. ಈ ಹಂತದ ನೆಲೆಗಳು ಹಾವೇರಿ ಜಿಲ್ಲೆಯ ಬ್ಯಾಡಗಿ ತಾಲೂಕಿನ ಕದರಮಂಡಲಗಿ ರಾಣೆಬೆನ್ನೂರು ತಾಲೂಕಿನ ಅಸುಂಡಿ, ಕವಲೆತ್ತು, ಕೂನಬೇವು, ನದೀಹರಳಹಳ್ಳಿ ನೆಲವಾಗಿಲ ಮುದೇನೂರು, ಹಾದರಗೇರಿ, ಶಿಗ್ಗಾಂವ ತಾಲೂಕಿನ ಮಾದಾಪುರ ಸವಣೂರು ತಾಲೂಕಿನ ಜಲ್ಲಾಪುರ, ತಳ್ಳಿಹಳ್ಳಿ, ಹಾನಗಲ್ ತಾಲೂಕಿನ ಹಾದರಗೇರಿ ಹಾವೇರಿ ತಾಲೂಕಿನ ಚನ್ನೂರು, ಮಣ್ಣೂರು, ಹಿರೇಕೆರೂರು ತಾಲೂಕಿನ ತಡಕನಹಳ್ಳಿ, ಹಳ್ಳೂರು, ಪುರದಕೇರಿಗಳಲ್ಲಿವೆ. ಇಲ್ಲಿ ಜೋರ್ವೆ ಹಾಗೂ ಬ್ರಹ್ಮಗಿರಿ ಮಾದರಿಯ ಕಂದುವರ್ಣದ ಮಡಿಕೆ ಭಾಗ ಉಜ್ಜಿ ನಯಗೊಳಿಸಿದ ಕೊಡಲಿಯ ಉಪಕರಣಗಳು, ಕಪ್ಪುವರ್ಣದ ಚಿತ್ರಿತ ಕೆಂಪು ಮಡಿಕೆ ಭಾಗಗಳು, ಇಬ್ಬದಿಯ ನೀಳ ಚಕ್ಕೆ ಮುಂತಾದ ಅವಶೇಷಗಳು ದೊರೆತಿವೆ.

**ಬೃಹತ್ ಶಿಲಾಯುಗ:** ಈ ಸಂಸ್ಕೃತಿಯ ಜನರು ಕುತೂಹಲಕರವಾದ ವಿವಿಧ ಮಾದರಿಯ ಬೃಹತ್ ಶಿಲಾಗೋರಿಗಳನ್ನು ನಿರ್ಮಿಸುತ್ತಿದ್ದರಿಂದ ಈ ಸಂಸ್ಕೃತಿಯನ್ನು ಬೃಹತ್ ಶಿಲಾಯುಗ ಸಂಸ್ಕೃತಿ ಎಂದು ಕರೆಯಲಾಗುತ್ತದೆ. ಅಲ್ಲದೆ ಈ ಹಂತದಲ್ಲಿ ಕಬ್ಬಿಣದ ಬಳಕೆಯ ಮಹತ್ವವನ್ನು ಕಾಣಬಹುದು ಮತ್ತು ಈ ಹಂತದ ಕಲ್ಲುಗೋರಿಗಳು ಈ ಜನರ ಪಾರಂಪರಿಕ ನಂಬಿಕೆಗಳ ತಳಹದಿಯ ಮೇಲೆ ರೂಪಿತವಾದವುಗಳಾಗಿವೆ.

ಈ ಸಂಸ್ಕೃತಿಯ ಜನರು ಜೀವಿಸುತ್ತಿದ ಪ್ರದೇಶಗಳನ್ನು ವಾಸ್ತವ್ಯದ ನೆಲೆಗಳೆಂದೂ ಹಾಗೂ ಶವ ಸಂಸ್ಕಾರದ ಕೇಂದ್ರಗಳನ್ನು ಗೋರಿ ನೆಲೆಗಳೆಂದೂ ಪ್ರತ್ಯೇಕವಾಗಿ ಅಧ್ಯಯನ ನಡೆಸಲಾಗಿದೆ. ದೇಶೀಯ ಹಾಗೂ ವಿದೇಶಿಯ ಪುರಾತಜ್ಞರಿಂದ ಸಾಕಷ್ಟು ಅಧ್ಯಯನವು ನಡೆದು ಹಲವು ಹೊಸ ಹೊಸ ವಿವರಗಳು ಬೆಳಕಿಗೆ ಬಂದಿದೆ. ಕಲ್ಗೋರಿಗಳ ನಿರ್ಮಾತೃಗಳು ಅವುಗಳ ಕಾಲಮಾನ, ಅವುಗಳ ನಿರ್ಮಾತೃಗಳ ವಸತಿಗಳು, ಅವರ ಸಾಮಾಜಿಕ, ಆರ್ಥಿಕ ಹಾಗೂ ಧಾರ್ಮಿಕ ಪದ್ಧತಿಗಳು ಆ ಕಾಲದ ವಿವರಗಳು ಪ್ರಕಟವಾಗುತ್ತಲೇ ಇವೆ. ಹಾಗಿದ್ದರೂ ಈ ಸಂಸ್ಕೃತಿಯ ಉಗಮ, ಪ್ರಸಾರ ಹಾಗೂ ವೈವಿಧ್ಯತೆಗಳ ಬಗೆಗೆ ವಿದ್ವಾಂಸರಲ್ಲಿ ಒಮ್ಮತದ ಅಭಿಪ್ರಾಯಗಳಿಲ್ಲ.

ಬೃಹತ್ ಶಿಲಾಯುಗದ ಜನರು ಭಾರೀ ಗಾತ್ರದ ಕಲ್ಲು ಚಪ್ಪಡಿಗಳಿಂದ ಮಾಡಿದ ಮೇಜಿನಂತೆ ಕಾಣುವ ಕಲ್ಪನೆಗಳು ಹಾಗೂ ದೊಡ್ಡ ದೊಡ್ಡ ಕಲ್ಲುಗಳಿಂದ ನಿರ್ಮಿಸಿದ ಶಿಲಾವೃತ್ತಗಳು ಹಾವೇರಿ ಜಿಲ್ಲೆಯ ಹಲವಡೆ ಕಂಡುಬಂದಿವೆ. ಬ್ಯಾಡಗಿ ತಾಲೂಕಿನ ಕದರಮಂಡಲಗಿ, ಕೆರವಡಿ, ಬುಡಪನಹಳ್ಳಿ, ಬ್ಯಾಡಗಿ, ಸಿಡೇನೂರು ರಾಣೆಬೆನ್ನೂರ ತಾಲೂಕಿನ ಅಸುಂಡಿ, ಕಮದೋಡ, ಕುಸನೂರು, ಕೋಟಿಹಾಳ, ಚೌಡಯ್ಯದಾನಪುರ, ಜನ್‌ಗೋಡ, ಮಲಕನಹಳ್ಳಿ, ಬ್ಯಾಡಗಿ ತಾಲೂಕಿನ ಕೆರವಡಿ, ಹಾವೇರಿ ತಾಲೂಕಿನ ಗಳಗನಾತ ಬಿದರಗಡ್ಡಿ ರಟ್ಟಿಹಳ್ಳಿ ತಾಲೂಕಿನ ಕಣವಿಸಿದ್ದಗೇರಿ, ಕಮಲಾಪುರ, ತಡಕನಹಳ್ಳಿ, ಹಳ್ಳೂರು, ಹಿರೇಮೊರಬ ಇಲ್ಲಿ ಶಿಲೆಯ ಹಲಗೆಗಳನ್ನು ಬಳಸಿ ಮಾಡಿದ ಬೃಹತ್ ಕಲ್ಪನೆ ಸಮಾಧಿಗಳನ್ನು ಪಾಂಡವರಕಟ್ಟೆ, ಸಿದ್ಧರಕಟ್ಟೆ, ಮೋರಿಯರ ಅಂಗಡಿ ಎಂದು ಕರೆಯುತ್ತಾರೆ. ಅಷ್ಟೇ ಅಲ್ಲದೆ ಇಲ್ಲಿ ಕಪ್ಪು ಕೆಂಪು ವರ್ಣದ ಮಡಿಕೆ ಭಾಗಗಳು ದೊರೆತಿರುವುದು ಸಹ ಗಮನಾರ್ಹ ಸಂಗತಿಯಾಗಿದೆ.

**ಇತಿಹಾಸದ ಆರಂಭಕಾಲ:** ಮಾನವನು ಜೀವನದ ವಿವಿಧ ಸಂಸ್ಕೃತಿಗಳ ಹಂತದಿಂದ ಮೇಲೇರಿ ಲಿಪಿಯ ಬಳಕೆಗೆ ಬಂದ ಹಂತವನ್ನು ಇತಿಹಾಸದ ಆರಂಭ ಕಾಲವೆಂದು ಗುರುತಿಸಬಹುದಾಗಿದೆ. ಈ ಹಂತದ ಪ್ರಮುಖ ನೆಲೆಗಳೆಂದರೆ ಬ್ಯಾಡಗಿ ತಾಲೂಕಿನ ಆಣೂರು, ಕದರಮಂಡಲಗಿ, ಕುಮ್ಮೂರು, ತಡಸ, ಬೆಳಕೇರಿ, ಮೋಟೆಬೆನ್ನೂರು, ರಾಣೆಬೆನ್ನೂರು ತಾಲೂಕಿನ ಇಟಗಿ, ಉಕ್ಕುಂದ, ಉಂಕ್ಲಿ, ಕುದರಿಹಾಳು, ಕುಪ್ಪೇಲೂರು, ಗೋಡಿಹಾಳ, ಚಿಕ್ಕಮಾಗನೂರು, ದಂಡಗಿಹಳ್ಳಿ, ಮೆಡ್ಲೇರಿ, ನಿಟಪಳ್ಳಿ, ಫತೇಪುರ, ಬೆನಕನಗೊಂಡ, ಮಾಗೋಡು, ಮುದೇನೂರು, ಹಿರೇಬಿದರಿ, ಹಿಲದಹಳ್ಳಿ, ಹೊನ್ನತ್ತಿ, ಹೊಳೆಅನ್ವೇರಿ ಶಿಗ್ಗಾಂವ ತಾಲೂಕಿನ ಮಾದಾಪುರ ಸವಣೂರು ತಾಲೂಕಿನ ತಳ್ಳಹಳ್ಳಿ, ಹಾನಗಲ್ ತಾಲೂಕಿನ ಹಾನಗಲ್ಲು ಹಿರೇಬಾಸೂರು ಹಾವೇರಿ ತಾಲೂಕಿನ ಅಕ್ಕೂರು, ಕೆಂಚಗಾರಗಟ್ಟಿ, ನರಸಿಂಹಪುರ, ಮಣ್ಣೂರು, ಸಂಗೂರು, ಹರಳಹಳ್ಳಿ, ಹೊಸರಿತ್ತಿ, ಹಂದಿಗನೂರು, ರಟ್ಟಿಹಳ್ಳಿ ತಾಲೂಕಿನ ಗುಂಡಗಟ್ಟಿ, ನಾಗವಂದ, ಪುರದಕೇರಿ, ಬೆಳ್ಳೂರು, ಬೈರವನಪಾದ, ಯಡಗೋಡು, ರಾಮತೀರ್ಥ, ಶಿರಗಂಬಿ, ಹೊಸಳ್ಳಿ ಇಲ್ಲಿ ಕಪ್ಪು – ಕೆಂಪುವರ್ಣದ, ಕಂದು ಕೆಂಪುವರ್ಣದ, ಕೆಂಪು ಲೇಪನದಡಿ, ಬಿಳಿ ವರ್ಣದ ಚಿತ್ರಿತ ಮಡಿಕೆ ಭಾಗಗಳು, ಸುಟ್ಟ ಮಣ್ಣಿನ ಗೊಂಬೆಗಳು ಆಯತಾಕಾರದ ಎರಡು ಇಟ್ಟಿಗೆ ಕಟ್ಟಡ ದೊರೆತಿರುವುದು ಗಮನಾರ್ಹ ಸಂಗತಿಯಾಗಿದೆ.

**ಉಪಸಂಹಾರ:** ಸರ್ವಜ್ಞನ ನಾಡಿನ ಪ್ರಾಚಿನ ಇತಿಹಾಸವನ್ನು ನೋಡಿದಾಗ ಭರತಖಂಡದ ವಿಶಾಲತೆಯನ್ನು ಎತ್ತಿತೊರಿಸುತ್ತದೆ. ಭಾರತವೆಂಬ ದೇಶ ಎಷ್ಟು ವಿಶಾಲವಾಗಿತ್ತು ಆ ದೇಶದಲ್ಲಿ ಕರ್ನಾಟಕ ಭೂಪ್ರದೇಶವು ಪಶ್ಚಿಮ ಭಾಗದಲ್ಲಿತ್ತು ಹಾಗೂ ಭೌಗೋಳಿಕವಾಗಿ ಸುಂಧರ ಹಾಗೂ ಮನೋಹರವಾದ ಕರಾವಳಿ ಪ್ರದೇಶ ದಟ್ಟ ಹರಿದ್ವರಣದ ಕಾಡುಗಳು ಕಡಿದಾದ ಪರ್ವತ ಪ್ರದೇಶಗಳಿಂದಲು ಕೂಡಿತ್ತು. ರಮಣಿಯವಾದ ಪಶ್ಚಿಮ ಘಟ್ಟಗಳು ಕರ್ನಾಟಕವನ್ನು ರಮ್ಯ ಮನೊಹರ ಗೊಳಿಸಿರುವುದನ್ನು ಕಾಣಬಹುದು. ವಿಶಾಲವಾದ ನದಿಗಳು ಕೆರೆಗಳು ಪಲವತ್ತಾದ ಭೂಮಿ ಸಂಪದ್ಭರಿತ ಸಸ್ಯರಾಶಿಯಿಂದ ಕೂಡಿದೆ. ಅಷ್ಟೆ ಅಲ್ಲದೆ ಧಾರ್ಮಿಕ ಭಾವನೆಯ ಪುರಾತನ ದೇವಾಲಯಗಳು ಭಕ್ತರ ಧಾರ್ಮಿಕ ನಿಷ್ಠೆಯ ಪ್ರತಿಕವಾಗಿ ಕಂಗೊಳಿಸಿವೆ. ನಾಡಿನಾದ್ಯಂತ ಅಗ್ರಹಾರಗಳು ಮಠಗಳು ಗುರುಕುಲಗಳು ಈ ನಾಡಿನ ಜನರ ಜ್ಞಾನದಾಸೋಹದ ಪ್ರತಿಕಗಳಾಗಿ ನಿಂತಿವೆ. ಈ ನಾಡಿನ ಪ್ರಾಚೀನ ಇತಿಹಾಸದ ಶೌರ್ಯವನ್ನು ಸಾರುವ ಕರ್ನಾಟಕವನ್ನಾಳಿದ ರಾಜ

ಮನೆತನಗಳು ಈ ನಾಡಿಗೆ ತಮ್ಮದೆ ಆದ ವಿಶಿಷ್ಟ ಕೊಡುಗೆಗಳನ್ನು ನೀಡಿವೆ. ಅಂತಹ ಪ್ರಬಲ ಸಾಮ್ರಾಜ್ಯಗಳು ತತ್ವಜ್ಞಾನಿಗಳನ್ನು ಸಂಗಿತ ಸಾಮ್ರಾಟರನ್ನು ಪೋಷಿಸಿ ಬೇಳೆಸಿವೆ. ಅವರ ಮುಖಾಂತರ ಸಾಮಾಜಿಕ ಧಾರ್ಮಿಕ ಶೈಕ್ಷಣಿಕ ಪರಂಪರೆಯನ್ನ ಮುಂದುವರೆಸಿಕೊಂಡು ಭಾರತದ ಶ್ರೀಮಂತ ಸಾಂಸ್ಕೃತಿಕ ಪರಂಪರೆಗೆ ಕರ್ನಾಟಕದ ಕೊಡುಗೆ ಅದ್ವಿತೀಯವೆಂದು ಸಾರಿ ಹೇಳುತ್ತದೆ. ಈ ನೆಲದ ನೆಲೆವಿಡಾದ ಸರ್ವಜ್ಞನ ನಾಡಿನ ಇತಿಹಾಸವು ಅಷ್ಟೆ ರೋಚಕವಾಗಿರುವುದನ್ನು ಈ ಲೇಖನದಲ್ಲಿ ಪ್ರಚುರ ಪಡಿಸಲಾಗಿದೆ. ನಾಡಿನ ಪ್ರಾಗೈತಿಕ ಇತಿಹಾಸ ಶಿಲಾಯುಗಗಳ ಇತಿಹಾಸವನ್ನು ಹಾಗೂ ಇತಿಹಾಸ ಕಾಲದ ಆರಂಭವನ್ನು ಎತ್ತಿ ತೊರಿಸಲಾಗಿದೆ. ಒಟ್ಟಾರೆಯಾಗಿ ಸರ್ವಜ್ಞನ ನಾಡಿನ ಇತಿಹಾಸ ಭಾರತ ದೇಶದಲ್ಲಿ ಭವ್ಯ ಪರಂಪರೆಯನ್ನು ಹೊಂದಿದೆ ಎಂಬುದನ್ನು ಅಲ್ಲಗಳಿಯಲಾಗದು.

### ಪರಾಮರ್ಶನ ಗ್ರಂಥಗಳು


1. ಇತಿಹಾಸ ಮತ್ತು ಪುರಾತತ್ವಕನ್ನಡ ವಿಷಯ ವಿಶ್ವಕೋಶ: ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಮೈಸೂರು–೨೦೦೯
2. ದಕ್ಷಿಣ ಭಾರತದ ದೇವಾಲಯಗಳು: ಶ್ರೀನಿವಾಸನ್ ಪಿ.ಆರ್.ಅ. ಕೆ.ಎನ್.ನರಹರಿ ೧೯೫೯
3. ಕರ್ನಾಟಕ ದೇವಾಲಯ ಕೋಶ: ಬಾಲಸುಬ್ರಮಣ್ಣ್ಯನ್ ವಾಸುದೇವನ್ ಪ್ರ.ಕ.ವಿ.ವಿ.ಹಂಪಿ೨೦೦೭
4. ಕರ್ನಾಟಕ ಸಂಕ್ಷಿಪ್ತ ಇತಿಹಾಸ: ಡಾ.ಸೂರ್ಯನಾಥ ಕಾಮತ್ ಸಪ್ನ ಬುಕ್ ಹೌಸ್ ಬೆಂಗಳೂರು–೧೯೯೯
5. ಕರ್ನಾಟಕ ಇತಿಹಾಸ ದರ್ಶನ: ಡಾ.ಎಂ.ವಿ.ಕೃಷ್ಣಾರಾವ, ಸಪ್ನ ಬುಕ್ ಹೌಸ್ ಬೆಂಗಳೂರು–೨೦೦೨
6. ರಾಷ್ಟ್ರಕೂಟ ಸಾಮಂತ ಚಲ್ಲಕೇತನರು: ಡಾ.ಚನ್ನಕ್ಕ ಎಲಿಗಾರ, ಸಮಾಜ ಪುಸ್ತಕಾಲಯ ಧಾರವಾಡ–೨೦೦೧
7. ಕರ್ನಾಟಕದ ಕಲಚೂರಿಯರು; ಡಾ.ದೇಸಾಯಿ ಪಾಂಡುರಂಗರಾಯ
8. ಹಾನಗಲ್ ಕದಂಬರು: ಡಾ.ಚನ್ನಕ್ಕ ಎಲಿಗಾರ, ಸಮಾಜ ಪುಸ್ತಕಾಲಯ ಧಾರವಾಡ–೨೦೦೪
9. ಧಾರವಾಡ ಜಿಲ್ಲಾ ಗ್ಯಾಜಿಟಿಯರ: ಡಾ.ಎಂ.ವಿ.ಕೃಷ್ಣಾರಾವ ಕರ್ನಾಟಕ ಪ್ರಾಚ್ಯ ಸಂಶೋಧನಾ ಇಲಾಖೆ ಧಾರವಾಡ–೧೯೯೫
10. ಎಪಿಗ್ರಾಪಿ ಅಪ್ ಕರ್ನಾಟಕ ಸಂ–೭: ಡಾ.ಎಂ.ವಿ.ಕೃಷ್ಣಾರಾವಪ್ರ ಕ.ವಿ.ವಿ ಧಾರವಾಡ
11. ಎಸ್.ಐ.ಐ XVIII ನಂ ೩೦ ,೧೦೮, ೧೫೭, ೧೫೯,ಹಾವೇರಿ
12. ಧಾರವಾಡ ಜಿಲ್ಲಾ ಶಾಸನಸೂಚಿ; ಡಾ.ಎಂ.ಎಂ.ಕಲಬುರ್ಗಿ ಪ್ರ ಕ.ವಿ.ವಿ ಧಾರವಾಡ